RegdNo B G155

Sri

(136) 2

22—7—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಸ್ಥಾಪಕರು — ಅರವಮನೆಸುಬ್ಬಸ್ವೇದಾರ್ ಎಂ ವಿ ಸುಬ್ಬರಾಯುರು

ಸಂಪಾದಕರು — ಧರ್ಮಪ್ರಚಾರನಿರತ ಎಂ.ಎಸ್ ಕೃಷ್ಣರಾವ್

2

ಹೆ ೀ ಳಿ ಕೆ

ಬಿಡುಗಡೆಯಿಲ್ಲ

ಶಾಂದಾವಿಲಾಸ ವಿದ್ಯಾಸಂಸ್ಥೆಗಳ ಆಡಳಿತ ಮಂಡಲಿಯು ಸದಸ್ಯರೂ ಆ ಸಂಸ್ಥೆಗಳ ಪ್ರಕಟಣಾಧಿಕಾರಿಗಳೂ ಆದ ಪೌಂಸಭಾ ಸದಸ್ಯ ಶ್ರೀ ಕೆ ಏ ಅನಂತಕಾಮಯ್ಯ, ಬಿ ಎ, ಬಿ ಎಲ್ ಅವರು ಈ ಕೆಳಗೆ ಕಂಡ ಹೇಳಿಕೆಯನ್ನಿತ್ತಿದ್ದಾರೆ—

ಶಾಂದಾವಿಲಾಸ ವಿದ್ಯಾಸಂಸ್ಥೆಗಳ ಆಡಳಿತ ಮಂಡಲಿಯ ಸದರಿ ಸಂಸ್ಥೆಯ ಸೈನ್ಸ್ ಕಾಲೇಜಿನ ಉಪಾಧ್ಯಾಯರ ವಿಷಯದಲ್ಲಿ ಅತ್ಯಂತ ಸಹಾನುಭೂತಿಯಿಂದಲೂ ಗೌರವದಿಂದಲೂ ವರ್ತಿಸಿತ್ತಾ ಅವರ ನ್ಯಾಯವಾದ ಬೇಡಿಕೆಗಳನ್ನು ಸರ್ವದಾ ಈಡೇರಿಸುತ್ತಲೇ ಇರುತ್ತಾರೆ. ಇವುಗಳಲ್ಲಿ ಮುಖ್ಯವಾಗಿ ಇಬ್ಬರು ಉಪಾಧ್ಯಾಯರನ್ನೂ ಕೆಲಸದಿಂದ ತೆಗೆದು ಹಾಕಿಲ್ಲ, ಹಿಂದೆ ಇದ್ದ ಉಪಾಧ್ಯಾಯರೇ ಮುಂದುವರಿಯುತ್ತಿದ್ದಾರೆ, ಕಟ್ಟಿ ಭತ್ಯ ಮುಂತಾದುವುಗಳನ್ನು ಸರ್ಕಾರದ ಮಟ್ಟದಲ್ಲಿಯೇ ಕೊಡಲಾಗುತ್ತಿದೆ, ಮತ್ತ ಈ ವರ್ಷದ ಜೂಲೈವರೆಗಿನ ಬಡ್ತಿಯನ್ನು ಕೂಡ ಕೊಡಲಾಗಿದೆ, ಆ ಆಡಳಿತ ಮಂಡಲಿಯಲ್ಲಿ ಕಾಲೇಜಿನ ಪಿನ್ಸಿಪಾಲರು ಉಪಾಧ್ಯಾಯರನ್ನು ಪ್ರತಿನಿಧಿಸುತ್ತಲೇ ಇದ್ದಾರೆ; ಕೇವಲ ಕೆಲವು ಉಪಾಧ್ಯಾಯರು ಇತ್ತೀಚೆಗೆ ಸ್ವಾರ್ಥ ಮನೋಭಾವನೆಯಿಂದ ನಿಯಮಾವಳಿಗೆ ವಿರೋಧವಾಗಿ ಆಡಳಿತ ಮಂಡಲಿಯನ್ನು ನರ್ಲಕ್ಷಿಸಿ ಪಿನ್ಸಿಪಾಲರ ಸ್ಥಾನವನ್ನು ಹೇಗಾದರೂ ಮಾಡಿ ಆಕ್ರಮಿಸಬೇಕೆಂಬ ಹಠದಿಂದ ಉದ್ದವಾದ ಸತ್ಯಾಗ್ರಹವನ್ನು ಪ್ರದರ್ಶಿಸಲು ಉದ್ಯುಕ್ತರಾಗಿರುವುದು ಉಪಾಧ್ಯಾಯರ ವೃತ್ತಿಯ ಘನತೆಯ ದೃಷ್ಟಿಯಿಂದಲೂ, ಶಾಂದಾವಿಲಾಸ ವಿದ್ಯಾ ಸಂಸ್ಥೆಗಳ ಉಪಾಧ್ಯಾಯರ ವಿದ್ಯಾರ್ಥಿಗಳ ಮತ್ತು ಪೋಷಕರ ದೃಷ್ಟಿಯಿಂದಲೂ ಬಹುಳ ಶೋಚನೀಯವಾದುದು. ಈಗಲಾದರೂ ಉಪಾಧ್ಯಾಯರು ಈ ಅನವಶ್ಯಕವಾದ ಕಾರ್ಯಕ್ರಮದಲ್ಲಿ ಮುಂದುವರಿಯದೆ ಆಡಳಿತಮಂಡಲಿಯನ್ನು ಅಭಿನಂದಿಸುತ್ತೇವೆ.

ಷೇಕ್ ಅಬ್ದುಲ್ಲರ ಬಿಡುಗಡೆಯಾಗುವರೆಂದು ಹಂಡಿರುವ ವದಂತಿಗಳೆಲ್ಲಾ ನಿರಾಧಾರವೆಂದು ಕಾಶ್ಮೀರ ಮುಖ್ಯಮಂತ್ರಿ ಸಿದ್ದೀಕ್ ಹೇಳಿದರು.

★

ಆಹಾರ ಸಮಸ್ಯೆ

ಬೆಂಗಳೂರು— ದೇಶದಲ್ಲಿ ಆಹಾರ ಸಮಸ್ಯೆಯು ವಿವಿಧ ವಿಚಾರಗಳನ್ನು ಕೂಲಂಕಷವಾಗಿ ಮುಖ್ಯಮಂತ್ರಿಗಳು ಸಮ್ಮಿಳಿತರಾಗಿ ಇಂದು ಸಂಜೆ ಆಲೋಚಿಸುವರು.

★

ಪಾರ್ಲಿಮೆಂಟರಿ ಬೋರ್ಡು

ಬೆಂಗಳೂರು— ಗೋವಾ ವಿಷಯವನ್ನು ಪುನರ್ಪರಿಶೀಲಿಸಲು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡು ಈ ಸಂಜೆ ಸೇರುವ ಸಂಭವವಿದೆ.

❀

ಪೂರ್ಣಾಧಿಕಾರ

ಪಣಜಿ— ಗೋವಾ ವಿಧಾನಸಭೆಯನ್ನು ನಿನ್ನೆ ಕಾಂಗ್ರೆಸ್ ಸಮಿತಿಯು ಗೋವಾ ಕಾಂಗ್ರೆಸ್ ಅಧ್ಯಕ್ಷ ಕಾಕೋಡ್ಕರ್ ಈ ವಿಷಯ ಚರ್ಚೆಗೆ ಪೂರ್ಣ ಅಧಿಕಾರ ಕೊಟ್ಟಿದೆ

★

ಆರೋಗ್ಯ ಸಪ್ತಾಹ

ಮೈಸೂರು— ಆರೋಗ್ಯ ಸಪ್ತಾಹದ ಕಾರ್ಯಕ್ರಮವು ನೊಪ್ಪೆ ನಜರಬಾದ್ ನೊಹಲ್ಲಾದಲ್ಲೂ, ನಿನ್ನೆ ಮಂಡೀ ಮೊಹಲ್ಲಾದಲ್ಲೂ ನಡೆಯಿತು

❀

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಪ್ರಸಕ್ತ, ಜ್ಯೋತಿರ್ವಿದ್ವನ್ಮಣಿ
ಸಂಪತ್ಕೃಷ್ಣಜೋಯಿ ಸಂವರಿಂದ

23 ಶುಕ್ರವಾರ ದಕಮಿ ಭಂಡಿ

ಗೋವಾ ವಿಚಾರದಲ್ಲಿ ಕೊಂಕಣಿಯರಿಗೆ ಬೀತಿ

ಗೋವಾ, ಉತ್ತರ ಕನಡ, ದಕ್ಷಿಣ ಕನಡದಲ್ಲಿನ ಲಕ್ಷಾಂತರ ಕೊಂಕಣಿ ಮಾತಾಡುವವರು ಗೋವಾ ವಿಚಾರದಲ್ಲಿ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡು ಮಾಡಿರುವ ನಿರ್ಧಾರದ ಬಗ್ಗೆ ತುಂಡಾ ಕಳವಳಗೊಂಡಿದ್ದಾರೆ — ಮಹಾರಾಷ್ಟ್ರೀಯರ ದಬ್ಬಾಳಿಕೆ ಮತ್ತು ಭಾಷಾವಾರು ಹುಚ್ಚಿನಿಂದ ತಮ್ಮ ಭಾಷೆ ಮತ್ತು ಸಂಸ್ಕೃತಿಯ ಭವಿಷ್ಯದ್ಗಗ್ಗೆ ಭೀತಿಗೊಂಡಿದ್ದಾರೆ ಎಂದು ಸಹಕಾರ ಸಚಿವ ಶ್ರೀ ಆರ್ ಎಂ ಪಾಟೀಲರು ತಮ್ಮ ಈಚಿನ ಗೋವಾ ಉತ್ತರ ಮತ್ತು ದಕ್ಷಿಣ ಕನಡದಲ್ಲಿನ ಪ್ರವಾಸದಲ್ಲಿ ಅರಿತಿದ್ದನ್ನು ಬೆಂಗಳೂರಿನಲ್ಲಿ ನಿನ್ನೆ ಪತ್ರಿಕೆಯವರಿಗೆ ತಿಳಿಸಿದರು — ಗೋವಾ ಮಹಾರಾಷ್ಟ್ರಕ್ಕೆ ಸೇರುವ ವಿಷಯದಲ್ಲಿ ಅಲ್ಲಿಯ ಜನರಲ್ಲಿ ಕಡೇಪಕ್ಷ ಶೇಕಡ 50 ಅದರೂ ವಿರೋಧವಾಗಿರುವರೆಂದು ಹೇಳಿದರು.

★

ಖೈದಿಗಳ ಬದಲಾವಣೆ

ಕರಾಚಿ— ರಾನ್‌ನಲ್ಲಿ ನಡೆದ್ರೈಕದನದಲ್ಲಿ ಸೆರೆಹಿಡಿಯಲ್ಪಟ್ಟ ಭಾರತ ಮತ್ತು ಪಾಕ್ ಸೈನಿಕರ ಅದಲುಬದಲಿಗೆ ಎರಡು ಸಂಕಾರಂಗಳೂ ಒಪ್ಪಿರುವುದಾಗಿ ತಿಳಿಯಿ ಬಂದಿದೆ

★

ರಾಣ್ ಮಾತುಕತೆ

ಕರಾಚಿ— ಭಾರತ ಮತ್ತು ಪಾಕಿ ಸ್ಥಾನ ವಿದೇಶಾಂಗ ಮಂತ್ರಿಗಳು ಕಚ್ಚಿನ ರಾಣ್ ಸಂಬಂಧದ ಮಾತುಕತೆ ನಡೆಸಲು ಆಗಸ್ಟು 16 ರಿಂದ 18 ರವರೆಗೆ ಸೇರಬೇಕೆಂದ ಪಾಕಿಸ್ಥಾನದ ಸಲಹೆಯಾಗಿದೆ

❀

ರಾಜ್ಯದಾದ್ಯಂತ ಹರತಾಳ

ಬೆಂಗಳೂರು— ವಿರೋಧ ರಾಜಕೀಯ ಪಕ್ಷಗಳ ಕಾರ್ಯಕಾರಿಣಿ ಸಮಿತಿಯು ಗೋವಾ ಭವಿಷ್ಯ ಬಗ್ಗೆ ಜನತೆಯು ಸಮಾಧಾನ ಪ್ರದರ್ಶಿಸಲು ರಾಜ್ಯಾದ್ಯಂತ ತಾ|| 24 ಶನಿವಾರ ಹರತಾಳ ನಡೆಸಲು ಕರೆಕೊಟ್ಟಿದೆ.

❀

ಶ್ರೀವೈಷ್ಣವಹಾರಾಜರು

ಬೆಂಗಳೂರು — ಬೆಂಗಳೂರಿಂದ ಮದರಾಸಿಗೆ ಮಂಗಳವಾರ ರಾತ್ರೆ ಪ್ರಯಾಣ ಮಾಡುತ್ತಿದ್ದ ವಿಮಾನವು ಗೌರಿಬಿದನೂರು ವಿಮಾನ ನಿಲ್ದಾಣದಲ್ಲಿ ಇಳಿದಿದ್ದಾಗ ಫಸ್ಟ್ ಕ್ಲಾಸು ಕಂಪಾರ್ಟ್‌ಮೆಂಟಿನಲ್ಲಿ ಹೊಗೆ ಕಾಣಿಸಿಕೊಂಡಿದ್ದರಿಂದ ಅವರನ್ನು ಬೇರೆ ಗಾಡಿಯಲ್ಲಿ ಕೂರಿಸಲಾಯಿತೆಂದೂ ವರದಿಯಾಗಿದೆ

❀

ತುಟಿ ಭತ್ತ ಹೆಚ್ಚಿಸಲಾಯಿತು

ಮೈಸೂರು ಸಂಕಾರವು ನೌಕರರ ತುಟ್ಟಿ ಭತ್ತ ಹೆಚ್ಚಿಸುವುದನ್ನು ಬುಧವಾರ ತಿಳಿಯಪಡಿಸಿದೆ — ಇದು ಇ ತಿಂಗಳ ತಾ || 1 ರಿಂದ ಜಾರಿಗೆ ಬರುವುದು — ರೂ 5 ರಿಂದ ರೂ 20 ರವರೆಗೆ ವಿವಿಧ ಸ್ಕೇಲಿನಲ್ಲಿ ಹೆಚ್ಚಿಸಲಾಗಿದೆ — ಇದರಿಂದ ಸಂಕಾರಿ ನೌಕರ ಸಂಬಳ ವೆಚ್ಚ ಅಲೋಯನ್ಸು ಬಿಲ್ಲು 1956 ರಲ್ಲಿನವ ಮೈಸೂರು ಸೃಷ್ಟಿಯಾದಾಗ್ಯ 22 ಕೋಟಿ ರೂಗಳು ಹೆಚ್ಚಿದೆ

ತ್ರಿಜಟ ಯಾಚಕನಾದ

ಹೋಗಿ, ಅಯೋಧ್ಯೆಯಲ್ಲಿ ಶ್ರೀ ರಾಮಚಂದ್ರನು ವಸಾ್ತ್ರಭರಣಗಳ ದಾನ ಮಾಡುತಾ್ತನಂತೆ : ನಾವು ಬಡವರು, ಹೋಗಬಹುದು, ಅವನು ಕೊಟ್ಟು ದನ್ನು ತಂಬಹುದು : ಮನೆಯಲ್ಲಿ ಉಪವಾಸ ಕುಳಿತು ಶಿವಾ ಶಾವಾ ಗೋ ವಿಂದಾ ಎನ್ನುವುದಕ್ಕಿಂತ ಅಲ್ಲಿಗೊಂಬುಟ್ಟು ಹೋಗಿಬರಬಾರದೇ ? ಈ ಉದ ವಾಸವನ್ನು ನಾವು ಇನ್ನೆಷ್ಟು ಸಮಯ ಅನುಭವಿಸಬೇಕು ?— ಬಡ ಗುಡಿಸ ಲೊಂದಲ್ಲಿ ಬಾ್ರಹ್ಮಣಳೊಬ್ಬಳು ತನ್ನ ಗಂಡನನ್ನು ಅಯೋಧ್ಯೆಗೆ ಹೋಗಲು ಒತಾ್ತಯಿಸುತ್ತಿದ್ದಳು.

ಬಾ್ರಹ್ಮಣ ಈಗ ವೃದ್ಧನಾಗಿದಾ್ದನೆ ; ಉಪವಾಸ ಅನುಭವಿಸಿ ಕೃಶನಾಗಿ ದಾ್ದನೆ ; ಆದರೂ ಅವನಿಗೆ ಯಾರಲ್ಲೂ ಯಾಚನೆ ದಾಸಲು ಇಷ್ಟವಿಲ್ಲ : ಎಷ್ಟೇ ಬಡತನ ಒಂಲಿ, ಊಟಕ್ಕೆ ಗತಿಯಿಲ್ಲದಿಂಲಿ, ಕೇವಲ ನೀರು ಕುಡಿದು ತನ್ನ ಹಸಿ ವನ್ನು ಹಿಂಗಿಸಿಕೊಂಡೆನೇ ಹೊರತು ಯಾರಲ್ಲೂ ತನ್ನ ಕಷ್ಟವನ್ನು ಕುರಿತು ಹೇಳಿಕೊಳ್ಳಲಿಲ್ಲ : ಅವರ ಸಹಾನುಭೂತಿಯನ್ನು ಕುರಿತು ಹಾರೈಸಲಿಲ್ಲ ; ಇಷ್ಟು ವರ್ಷಗಳನ್ನು ಹೀಗೆಯೇ ಕಳೆದು ಈ ಮುಪ್ಪಿನ ಸಮಯದಲ್ಲಿ ತನ್ನ ಪ್ರತಿಜ್ಞೆ ಭಂಗಕಂಲೇ ಎಂದವನಿಗೆ ತೋರಿತು ; ಶ್ರೀರಾಮ ಕೊಟ್ಟರೆ ತನಗೇನು ಕೊಟ್ಟಾ ನು ? ನಾಲ್ಕು ದಿನಸ ಅನ್ನ, ಮುಂದೆ ಇದೇ ಗತಿಯಲ್ಲವೇ ? ಇ ಷ್ಟೆ ಲ್ಲಾ ಯೋಚನೆ ಮಾಡಿ ಅವನು ನುಡಿದ– ನನ್ನಿಂದ ಈ ಕಾರ್ಯ ಅಸಾಧ್ಯ : ನನಗೆ ಯಾಂಲ್ಲಿಯೂ ಯಾಚಕನಾಗಿ ಹೋಗುವ ಇಷ್ಟವಿಲ್ಲ : ಯಾಚಕನಾಗಿ ಹೋಗು ವುದೆಂದರೆ ನನ್ನ ಜೀವದ ಸುಖ್ಕು ಬರುತ್ತದೆ ; ಇಂತಹ ಕಠಿಣ ಕೆಲಸವನ್ನು ನನಗೆ ನಿಯೋಜಿಸಬೇಡ. [ಮುಂದುವರಿಯುವುದು

ಸಮಯೋಚಿತ ಸೂಕ್ತಿಗಳು

ಬಂಗಾರದ ಜಿಂಕೆಯು ಹಿಂದಿದ್ದಿಲ್ಲ, ಅದನ್ನು ಯಾರೂ ನೋಡಿದ್ದಿಲ್ಲ, ಅದರ ವಿಚಾರವನ್ನು ಕೇಳಿದ್ದಿಲ್ಲ; ಆದರೂ ರಾಮನಿಗೆ ಅದನ್ನು ಹಿಡಿದು ತರುವ ಬಯಕೆ; ಕೆಡುವ ಕಾಲಕ್ಕೆ ಬುದ್ಧಿಯೇ ತಿರುಗುಮುರುವಾಗುತ್ತದೆ.

o o o

ನೀಚನ ಶಿಷ್ಟತೆಯು ಪರರಿಗೆ ಉಪದ್ರವಕ್ಕೆ ಕಾರಣವು ; ಹುಲಿಯು ಉಪ ವಾಸ (ವ್ರತ) ದ ಬಳಿಕ ವಾರಣವೆಂದರೆ ಪಶುವಾರಣ (ಸಾಧು ವಾ್ಯಣಿಗಳ ವಧೆ) ವೇ.

Quality Printing — Neat Binding

Lakshminarasimha Press

Sivarampet, Mysore

ಅಶೋಕ ಏಜೆನೀಸ್

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಎಲ್ಲ ವಿಧದ ಆಯುರ್ವೇದ ಔಷಧಗಳೂ ನಮ್ಮಲ್ಲಿ ದೊರೆಯುತ್ತವೆ
ರೋಗಿಗಳಿಗೆ ಸೂಕ್ತ ಔಷಧಿ ಕೊಡಲಾಗುತ್ತದೆ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

—o—

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕ ದಾನಿ ಸ್ವೀಕರಿಸಲಾಗುವುದು

ಪುಡಲಾಂಡ್ ಮಹಿಮಾನ್ವಿತ 9 ನೇ ವಾರ

ಜಾನ'ವರ' Janwar

ರಾಜಶ್ರೀ, ಶಮ್ಮಿ ಕಪೂರ್, ಪೃಥ್ವಿರಾಜ್, ರಾಜೇಂದ್ರನಾಥ್ ಅಭಿನಯಿಸಿರುವ
ಸುಂದರ ದೃಶ್ಯಗಳು, ಮಧುರ ಸಂಗೀತ, ಆಕರ್ಷಣೀಯ ನೃತ್ಯಗಳು
ಹಾಸ್ಯ ವಿನೋದಗಳಿಂದ ಕೂಡಿದ ಈಸ್ಟ್‌ಮೆನ್ ಕಲರ್ ಹಿಂದೀ ಚಿತ್ರ

ಅಪೆರ— ಯಶಸ್ವಿ 4 ನೇ ವಾರ

ಮಾಡರ್ನ್ ಥಿಯೇಟರ್ಸ್‌ನವರ 100 ನೇ ಅಮೋಘ ತಮಿಳು ಚಿತ್ರ

ವಲವನಕ್ಕು ವಲವನ'

[ನಟವರ್ಗ— ಜೆಮಿನಿ ಗಣೇಶ್, ಸಾವಿತ್ರಿ, ಶಂಗವೇಲು, ಅಶೋಕ್
ಮುತ್ತುಲಕ್ಷ್ಮಿ, ಮನೋರಮ [ಪ್ರತಿ ದಿನ 3 ಆಟಗಳು]

SHAKTI

SUDHA

A Superb Tonic

Protect the Cow

ಗೋರಂಡಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಿಗಾಗಿ ನಡೆಯಲಿ

Edited, Printed & Published by Dharma pracharo niratha
M S Krishna Rao (Proprietor) at the Satyavadi Press
Chamarajapuram, Mysore 4